ಕಥೆ

# ತೊಲಗಲಿಲ್ಲ



ಎಸ್. ನಟರಾಜ ಬೂದಾಳು
ಕಲೆ: ವೆಂಕಟ್ರಮಣ ಭಟ್

ಬಿಡು ಬಿಡಿನ್ರ್ಯಾತರ ಜ್ಞಾನ । ನಿನ್ನ
ನಡೆ ನುಡಿ ಒಂದಾಗದಿಹುದೆ ಅಜ್ಞಾನ ।ಪ।
. . .
ತನುವಿನಾಶೆಯ ಬಿಡಲಿಲ್ಲ । ಹೇಸಿ
ಮನದ ಸಂಕಲ್ಪಾಗಳ್ ಬೋಳಾಗಲಿಲ್ಲ ।
ಅನುಮಾನವನು ಬಿಡಲಿಲ್ಲ । ನಮ್ಮ
ಗುರುಮಹಲಿಂಗನೋಳ್ । ಸಮರಸವಿಲ್ಲ ।ಬಿಡು।

ಕೊನೆಸುತ್ತಿನ ತಾಳದಲ್ಲಿ ದಮ್ಮಡಿಯ ಅಬ್ಬರದ ನಡುವೆ ತತ್ವದ ಸಾಲುಗಳು ಕರಗಿ ಹೋಗುತ್ತಿದ್ದವು. ತತ್ವ ಭಜನೆ ಶುರುವಾಗಿ ಅದಾಗಲೇ ಸುಮಾರು ಹೊತ್ತಾಗಿತ್ತು. ಅಮಾಸೆಯ ಕತ್ತಲು ಗವ್‌ಗುಡುತ್ತಿತ್ತು. ಅಜ್ಜಯ್ಯನ ಒಂದಂಕಣದ ತೋರುಗದ್ದುಗೆಯ ಮುಂದೆ ಸ್ವಾಗೆ ಗರಿಯಲ್ಲಿ ಬಗ್ಗಿಸಿದ್ದ ಒಪ್ಪಾರಿನ ಕೆಳಗೆ ಕುಳಿತಿದ್ದವರ ಮಕಗಳು ಸರಿಯಾಗಿ ಕಾಣುತ್ತಿರಲಿಲ್ಲ. ಒಳಗೆ ಉರಿಯುತ್ತಿದ್ದ ದೀಪವು ಹೊರಗಿದ್ದವರ ಮಕಗಳನ್ನು ನೋಡಲು ತವಕಿಸಿದರೂ ಸಾಧ್ಯವಾಗದೆ ಅಲ್ಲಿದ್ದ ಅಜ್ಜಯ್ಯನ ಪೋಟೊದ ಒಳಗೆ ತನ್ನನ್ನೆ ನೋಡಿಕೊಳ್ಳುತ್ತಿತ್ತು. ಪೋಟೊದಲ್ಲಿ ಬಂಗಿ ಸೇದುವ ಭಂಗಿಯಲ್ಲಿ ಕುಕ್ಕರುಗಾಲಿನಲ್ಲಿ ಕೂತಿದ್ದ ಅಜ್ಜಯ್ಯನ ಮಕ ಮಂದಹಾಸದಿಂದ ಮಿನುಗುತ್ತಿತ್ತು. ತತ್ವಕ್ಕೆ ಇಡಿಯಾಗಿ ತನ್ನನ್ನೆ ತಾನು ಅರ್ಪಿಸಿಕೊಂಡು ತಲ್ಲೀನನಾಗಿ ಹಾಡುತ್ತಿದ್ದ ಕೋದಂಡಯ್ಯ ನಡುವೆ ಮೆಲ್ಲಗೆ ಪಕ್ಕಕ್ಕೆ ಸರಿದುಕೂತು ಸಿದ್ಧಪತ್ರೆಯನ್ನು ನುಣ್ಣಗೆ ಒಸಗಿ ಕಸ ಕಡ್ಡಿ ಇತ್ಯಾದಿ ತೆಗೆದು ಚಿಲುಮೆಗೆ ತುಂಬಿ ಸಿದ್ಧಮಾಡಿದ್ದ. ಮುಂದಿನ ತತ್ವವನ್ನು ಎತ್ತಿಕೊಳ್ಳುವ ಮುನ್ನ ಅದಕ್ಕೆ ಬೆಂಕಿ ತಾಗಿಸಿ ನರ್ವಾಣಜ್ಜನ ಕೈಗೆ ಶಿವಾ ಅಂತ ನೀಡಿದ. ನರ್ವಾಣಜ್ಜನೂ ಗುರುವೇ ಗುರುಸಿದ್ಧಾ ಎನ್ನುತ್ತ ಚಿಲುಮೆಯನ್ನು ಬಾಯಿಗಿಟ್ಟು ಮೂರು ಸಾರಿ ಸಣ್ಣಗೆ ಎಳೆದು ಪುಟು ಮಾಡಿದ. ಚಿಲುಮೆಯ ಬಾಯಿ ಕೆಂಪನೆಯ ಮುತ್ತಿನಂತೆ ಫಳರ್ಿಸಿತು. ಒಮ್ಮೆ ಜೋರಾಗಿ ದಮ್ಮು ಎಳೆದ ನರ್ವಾಣಜ್ಜನ ಮೂಗು ಬಾಯಿಗಳಿಂದ ಬೆಳ್ಳನೆ ಹೊಗೆ ಬಂದದ್ದು ಆ ಕತ್ತಲಲ್ಲಿಯೂ ಮಸುಕಾಗಿ ಕಾಣಿಸುತ್ತಿತ್ತು. ಎಲ್ಲರೂ ಶಿವಾ ಎಂದೋ ಗುರುವೇ

